**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ- ಶ್ರೀಮತಿ ಸಿ ಬಿ ಎನ್ ವಕೀಲರಿಂದ ವಾದಿಯ ಪರವಾಗಿ**

4. ನಾನು 4ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯವರು ಸಲ್ಲಿಸಿರುವ ದಾವೆಯ ಬಗ್ಗೆ ಹಾಗೂ ನಾನು ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಮ್ಮ ತಾತ ಕರಿಯಪ್ಪ ನನ್ನ ಅಜ್ಜಿ ವೆಂಕಟಮ್ಮ ಇವರನ್ನು ಮದುವೆಯಾಗಿದ್ದರು ಎಂದರೆ ಸರಿ. ಅವರಿಗೆ ನನ್ನ ತಂದೆ ಪೂಜಾರಿ ಕರಿಯಪ್ಪ, ಗಂಗಮ್ಮ ಮತ್ತು ಕಮಲಮ್ಮ ಎಂಬ ಮೂವರು ಮಕ್ಕಳು ಇದ್ದರು ಎಂದರೆ ಸರಿ. ಈ ಮೂವರು ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಕರಿಯಪ್ಪ ನಮ್ಮ ತಾಯಿ ಭಾಗ್ಯಮ್ಮ ರವರನ್ನು ಮದುವೆಯಾಗಿದ್ದರು ಎಂದರೆ ಸರಿ. ಅವರಿಗೆ 5 ಜನ ಮಕ್ಕಳು ಇದ್ದರು ಎಂದರೆ ಸರಿ. ಅವರು ನಾನು ಮತ್ತು 2 ರಿಂದ 5 ನೇ ಪ್ರತಿವಾದಿಗಳು ಎಂದರೆ ಸರಿ.

5. ಮೂಲ ಕರಿಯಪ್ಪರವರ 2ನೇ ಮಗಳು ಗಂಗಮ್ಮ ಇವರ ಮಗ ನಿಂಗಪ್ಪನ ಮದುವೆ 4ನೇ ಪ್ರತಿವಾದಿ(ಪ್ರತಿವಾದಿ 6 ಎ) ಯೊಂದಿಗೆ ಆಗಿತ್ತು ಎಂದರೆ ಸರಿ. ನಿಂಗಪ್ಪ ಈ ದಾವೆ ಹಾಕಿದ ಮೇಲೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ನಿಂಗಪ್ಪನ ವಾರಸುದಾರರು 4ನೇ ಪ್ರತಿವಾದಿ ಹಾಗೂ ಪ್ರತಿವಾದಿ 6 ಬಿ ದಿಂದ ಡಿ ಈ ದಾವೆಯಲ್ಲಿ ಇರುತ್ತಾರೆ ಎಂದರೆ ಸರಿ.

6. ಮೂಲ ಕರಿಯಪ್ಪರವರ 3ನೇ ಮಗಳು ಕಮಲಮ್ಮ ಇವರ ಮದುವೆ ರಾಮಪ್ಪ ರೊಂದಿಗೆ ಮಾಡಿದ್ದರು ಎಂದರೆ ಸರಿಯಲ್ಲ. ಅವರಿಗೆ ಒಬ್ಬಳೇ ಮಗಳು ಶಶಿಕಲಾ ಇದ್ದು ಅವರೇ ಈ ದಾವೆಯ ವಾದಿ ಇರುತ್ತಾರೆ ಎಂದರೆ ಸರಿಯಲ್ಲ. ಕಮಲಮ್ಮ ನನ್ನ ಅತ್ತೆ ಎಂದರೆ ಸರಿ. ಕಮಲಮ್ಮ ಸಾಯುವವರೆಗೆ ನನ್ನ ಅಕ್ಕ 3ನೇ ಪ್ರತಿವಾದಿಯವರ ಮನೆಯಲ್ಲಿ ಇದ್ದರು. ಅವರು ಈಗ ಎರಡು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಕಮಲಮ್ಮ ಹಾಗೂ ರಾಮಪ್ಪ ರವರ ಮದುವೆಯಾಗಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತ ಕರಿಯಪ್ಪ ಅವರಿಬ್ಬರ ಮದುವೆ ಮಾಡಿದ್ದು ಅವರು ನಂತರ ಶಿವಮೊಗ್ಗದಲ್ಲಿ ದಾಂಪತ್ಯ ಜೀವನ ನಡೆಸಿರುತ್ತಾರೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಿದ ಮೇಲೆ ವಾದಿಯವರ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ನನಗೆ ವಾದಿಯವರ ಪರಿಚಯ ಇರುವುದಿಲ್ಲ. ನಮ್ಮ ಸಂಬಂಧಿಕರಿಂದ ವಾದಿಯ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ನಮ್ಮ ಸ್ವತ್ತಿನಲ್ಲಿ ಭಾಗ ಕೇಳಿ ಅವರು ದಾವೆ ಹಾಕಿರುತ್ತಾರೆ.

7. ದಾವಾಸ್ವತ್ತುಗಳು ಚಿತ್ರದುರ್ಗ ತಾಲ್ಲೂಕಿನ ಚಿಕ್ಕಬೆನ್ನೂರು ಗ್ರಾಮದಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಸ್ವತ್ತುಗಳು ಮೂಲ ಕರಿಯಪ್ಪ ರವರಿಂದ ನನ್ನ ತಂದೆಗೆ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಅವುಗಳನ್ನು ನನ್ನ ತಂದೆ ಖರೀದಿಸಿದ್ದರು. ನನ್ನ ತಂದೆ ಖರೀದಿಸಿದ್ದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.ನನ್ನ ತಂದೆಗೆ ಎರಡು ದಾವಾಸ್ವತ್ತು ಐ ಹೆಚ್ ಸಿ 609 ಮೂಲಕ ಪೌತಿ ಖಾತೆಯ ಮೂಲಕ ಅವರ ತಂದೆಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಪಿರ್ತಾಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾಸ್ವತ್ತುಗಳನ್ನು ವಾದಿಯ ತಾಯಿ ಹಾಗೂ ನನ್ನ ತಂದೆ ಮತ್ತು ಗಂಗಮ್ಮ ಒಟ್ಟು ಕುಟುಂಬದಲ್ಲಿ ಅನುಭವಿಸುತ್ತಿದ್ದರು.

8. ನನ್ನ 2014 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ಮೇಲೆ ಬರೀ ಗಂಡು ಮಕ್ಕಳ ಹೆಸರುಗಳನ್ನು ನೀಡಿ ಪೌತಿ ಖಾತೆ ಮಾಡಿಸಿಕೊಂಡಿರುತ್ತೇವೆ.ಪೌತಿ ಖಾತೆ ಮಾಡಲು ನೀಡಿದ ಅರ್ಜಿ ಹಾಗೂ ವಂಶವೃಕ್ಷದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

<u>**ಪಾಟೀ ಸವಾಲುಃ-**</u> ವಾದಿಯರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ